ಭಯ್ಯ...' ಅಂದು ಹಟ ಮಾಡುತ್ತಿದ್ದ ಮಗಳನ್ನು ಎತ್ತಿಕೊಂಡು ಇಳಿದೆ. ಟ್ಯಾಕ್ಸಿ ಏರ್ ಪೋರ್ಟಿನಲ್ಲಿ ನಿಲ್ಲುತ್ತಿದ್ದಂತೆಯೇ ಇವರು ಅಲ್ಲೇ ಇದ್ದರು. ಟಿಕೆಟ್ ನನ್ನ ಕೈಗೆ ಕೊಟ್ಟು, 'ನಡಿ ಒಳಗೆ... ಇನ್ನೂ ಒನ್ ಅವರ್ ಟೈಂ ಇದೆ' ಅಂದರು. ನಾನು ಅರ್ಧ ಅಳುತ್ತಲೇ ಹೇಳಿದೆ, 'ನಮ್ಮ ಜೊತೇನೇ ಕರಕೊಂಡು ಬರೋಣ ಅಂತ ಹೇಳಿದೆ. ಬೇಡ ಅಂದ್ರಿ. ಹವಾಮಾನ ವಿಪರೀತ, 78 ವರ್ಷದ ಮುದುಕಿ, ಸಹಿಸೋಲ್ಲ ಅದೂ ಇದೂ ಅಂತ. ಈಗ ನೋಡಿ... ಈ ದೆಹಲಿಯಿಂದ ಬೆಂಗಳೂರಿಗೆ ಎಷ್ಟು ದೂರ ಅಂತ. ಅತ್ತಿಗೆ ಬೇರೆ ಕೆನಡಾಗೆ ಹೊರಟುಬಿಟ್ಟರು. ಇನ್ನೂ ಎರಡು ತಿಂಗಳಾಗಿಲ್ಲ... ಅಷ್ಟರಲ್ಲೇ ಅಜ್ಜಿಗೆ ಹುಶಾರಿಲ್ಲ...' ಕಣ್ಣೊರೆಸಿಕೊಳ್ಳುತ್ತಲೇ ಏರ್‌ಪೋರ್ಟ್ ಒಳಗೆ ಇವರ ಜೊತೆ ಹೊರಟೆ. ಬಾಗಿಲಲ್ಲಿ ಸೆಕ್ಯೂರಿಟಿ ಚೆಕ್ ಅದೂ ಇದೂ ಫಾರ್ಮಾಲಿಟೀಸ್ ಜೊತೆಯೇ, 'ಅಮ್ಮಂಗೆ ಮೊದಲೇ ಅವರನ್ನ ಕಂಡರೆ ಅಷ್ಟಕ್ಕಷ್ಟೆ. ಇನ್ನು ಈಗ ಹುಷಾರಿಲ್ಲ ಅಂದರೆ ನೋಡಿಕೊಳ್ತಾರಾ?' ನಡು ನಡುವೆ ಮಾತನಾಡುತ್ತಿದ್ದೆ.

ಇವರು ಪುಟ್ಟೀನ ಎತ್ತಿಕೊಂಡು ಅವಳೇನು ತಿಂದಳು ಅಂತ ಕೇಳುತ್ತಲೇ... ನನ್ನ ಮಾತನ್ನೂ ಕೇಳುತ್ತ, ಅವಳ ಕಂಪ್ಲೈಂಟ್ ಕೂಡ ಕೇಳಿ, 'ನೋಡು ಪುಟ್ಟಿ... ಅಲ್ಲಿ ಅಜ್ಜಿಗೆ ಹುಷಾರಿಲ್ಲ ಅಲ್ವ. ನಾಳೆ ನಾನೂ ಕೂಡ ಬಂದು ಬಿಡ್ತೀನಿ. ಈ ಸಲ ನಿನಗೆ ಇನ್ನೂ ಒಳ್ಳೇ ಫ್ರಾಕ್ ತೆಗೆಸಿ ಕೊಡ್ತೀನಿ. ಅಮ್ಮಂಗೆ ಹಟ ಮಾಡಿ ತೊಂದರೆ ಕೊಡಬೇಡ' ಎಂದು ಸಮಾಧಾನ ಮಾಡುತ್ತಿದ್ದರು. ನನ್ನ ಕಡೆ ತಿರುಗಿ, 'ನೋಡು... ಅಲ್ಲಿ ಕೂಗಾಡೋದು, ರೇಗಾಡೋದು ಎಲ್ಲ ಮಾಡಬೇಡ. ನೀನು ಹೋಗುತ್ತಿರುವುದು ಶೇಷಜ್ಜಿನ ನೋಡಿಕೊಳ್ಳೋಕೆ. ಪರಿಸ್ಥಿತಿ ನೋಡಿಕೊಂಡು ಬೇಕು ಅಂದರೆ ಇಲ್ಲಿಗೇ ಕರಕೊಂಡು ಬಂದುಬಿಡೋಣ. ಸರಿನಾ? ಈ ಹವೆ ಅವರಿಗೆ ಒಗ್ಗಲ್ಲ ಅಂತ ಹೇಳಿದ್ದೆ ಅಷ್ಟೆ. ನಿನ್ನ ಅತ್ತಿಗೆ ಕೆನಡಾಗೆ ಹೋಗ್ತಾರೆ ಅಂತ ಯಾರಿಗೆ ಗೊತ್ತಿತ್ತು. ಇರಲಿ. ಈಗ ನಿನ್ನ ಕೆಲಸ ಮಾಡು. ಅಲ್ಲಿ ರೀಚ್ ಆದ ಕೂಡಲೇ ಫೋನ್ ಮಾಡು... ಈಗ ಒಳಗೆ ಹೋಗು. ಚೆಕ್ ಇನ್ ಆಗುವಂತೆ. ಟೇಕ್ ಕೇರ್. ಮಾವಂಗೆ ಫೋನ್ ಮಾಡಿದ್ದೀನಿ. ಅವರು ರಿಸೀವ್ ಮಾಡ್ತಾರೆ' ಅಂದು ಒಳಗೆ ಕಳಿಸಿದರು. ಅವರಿಗೆ ಹೇಳಿ ಒಳಗೆ ಹೊರಟೆ. ಪುಟ್ಟಿ 'ಪಪ್ಪಾ ಬೈ' ಅಂದಳು.

ಫ್ಲೈಟ್ ಹತ್ತಿ ಕುಳಿತವಳ ಕಣ್ಣ ಮುಂದೆ ಸುಳಿದವರು ಶೇಷಜ್ಜಿ. ಯಾವ ಜನ್ಮದ ಋಣ ಅದು ತಿಳಿಯದು. ನನ್ನ ಮದುವೆಗೂ ಮೊದಲೇ ಅವರು ನಮ್ಮ ಮನೆ ಸೇರಿದ್ದರು. ನನ್ನ ಅವರ ಸಂಬಂಧ ಒಂದು ವಿಚಿತ್ರವಾದ ಸಂಬಂಧ. ಅವರು ಅತ್ತಿಗೆಗೆ ಸೋದರತ್ತೆ. ಅಂದರೆ ಅವರ ತಂದೆಯ ಹಿರಿಯ ಅಕ್ಕ. ಚಿಕ್ಕ ವಯಸ್ಸಿನಲ್ಲೇ ಅವರಿಗೆ ಗಂಡ ತೀರಿಕೊಂಡರು ಎಂದು ಅತ್ತಿಗೆಯ ಮನೆಯಲ್ಲೇ ಇದ್ದುಬಿಟ್ಟರು. ಅತ್ತಿಗೆಗೆ ತಾಯಿ ಇರಲಿಲ್ಲ. ತಂದೆ ಮತ್ತು ಸೋದರತ್ತೆಯ ಕೈಯಲ್ಲೇ ಬೆಳೆದಿದ್ದರು. ಶೇಷಜ್ಜಿಯಂತೂ ಧಾರಾಳವಾಗಿ ಪ್ರೀತಿ ಸುರಿಸಿಯೇ ಬೆಳೆಸಿದ್ದರು. ಅತ್ತಿಗೆಯ ತಂದೆಯೂ ತೀರಿದ ನಂತರ ಅಪ್ಪ 'ನಮ್ಮ ಮನೆಗೇ ಬಂದು ಬಿಡಿ' ಅಂತ ಉದಾರ ಹೃದಯದಿಂದ ಕರೆದಿದ್ದರು. ಅತ್ತಿಗೆ ಮತ್ತು ಅಣ್ಣನೂ ಕರೆದಾಗ ಅವರು ಬಂದು ನಮ್ಮ ಮನೆ ಸೇರಿದ್ದರು. ನಾನು ಆಗಷ್ಟೇ ಪಿಯುಸಿ ಮುಗಿಸಿ ಮನೆ ಸೇರಿದ್ದೆ. ಅಮ್ಮನಿಗೆ ನಾನು ಮುಂದೆ ಓದಿ ಮಾಡುವುದೇನು ಎಂಬ ಉದಾಸೀನ. ನನಗೂ ಓದಿನಲ್ಲಿ ಅಂತಹ ಆಸಕ್ತಿಯೇನೂ ಇರಲಿಲ್ಲ. ಆದರೆ ಅತ್ತಿಗೆಯ ಜೊತೆಯಲ್ಲಿ ನನ್ನದು ಅವಿನಾಭಾವ ಸಂಬಂಧ. ಏಕೋ ಏನೋ ತಿಳಿಯದು. ಅಮ್ಮನ ಮೂಢನಂಬಿಕೆಗಳಿಗಿಂತ ಅತ್ತಿಗೆಯ ವಿಚಾರಧಾರೆ ನನಗೆ ಇಷ್ಟವಾಗುತ್ತಿತ್ತು. ಶೇಷಜ್ಜಿಯ ಬರವು ನನಗೆ ವಿಶೇಷವಾಗಿ ಏನೂ ಅನ್ನಿಸದಿದ್ದರೂ ಅತ್ತಿಗೆ ಮಾತ್ರ ಕೇಳಿದ್ದಳು, 'ಲೀಲ ನೋಡು ಅಜ್ಜಿ ಬಂದರೆ ನಿನಗೆ ಬೇಸರ ಇದ್ದರೆ ಹೇಳಿಬಿಡು. ಅವರಿಗೆ ಅಲ್ಲೇನೂ ಕಮ್ಮಿ ಇಲ್ಲ. ಇರುತ್ತಾರೆ'